**ಪಾಠ – 5** *ಜುಲೈ 28 – ಆಗಸ್ಟ್ 3

**ಪೌಲನ ಪರಿವರ್ತನೆ**



## ಸಬ್ಬತ್ತು ಮದ್ಯಾಹ್ನ

**ಈ ವಾರದ ಅಭ್ಯಾಸಕ್ಕಾಗಿ ಓದಿರಿ:** ಅಪೋಸ್ತಲರ ಕೃತ್ಯ 26:9–11; ಧರ್ಮೋಪದೇಶಕಾಂಡ 21:23, ಅ.ಕೃತ್ಯ 9:1–20, 1 ಕೊರಿಂಥ 9:1, ಗಲಾ 1:1, ಅ.ಕೃತ್ಯ 9:20–30

**ಸ್ಮರಣವಾಕ್ಯ: "ನೀನು ಹೋಗು; ಆ ಮನುಷ್ಯನು ಅನ್ಯಜನರಿಗೆ ಅರಸುಗಳಿಗೆ ಇಸ್ರಾಯೇಲ್ಯರಿಗೂ ನನ್ನ ಹೆಸರನ್ನು ತಿಳಿಸುವುದಕ್ಕಾಗಿ ನಾನು ಆರಿಸಿಕೊಂಡ ಸಾಧನವಾಗಿದ್ದಾನೆ." (ಅ.ಕೃತ್ಯ 9:15).**

ತಾರ್ಸದ ಸೌಲನ ಪರಿವರ್ತನೆಯು(ಪೌಲನಾದದ್ದು) ಅಪೊಸ್ತಲರ ಕಾಲದ ಸಭೆಯ ಚರಿತ್ರೆಯಲ್ಲಿ ಅಜರಾಮರವಾದ ಘಟನೆಯಾಗಿದೆ. ಆತನ ಪರಿವರ್ತನೆ ಮಾತ್ರ ಅವನಿಗೆ ಪ್ರಾಮುಖ್ಯತೆಗಳಿಸುವುದಿಲ್ಲ, ಇದಕ್ಕಿಂತಲೂ ಹೆಚ್ಚಾಗಿ ಪೌಲನು ಅಂದಿನ ಕ್ರೈಸ್ತ ಸಭೆಯ ವೈರಿಯಾಗಿದ್ದ, ನಿಜಕ್ರೈಸ್ತನಾಗಿ ಪರಿವರ್ತನೆಗೊಂಡ. ಅಲ್ಲದೇ ಆತನು ಖ್ಯಾತಿಯಾಳನಿದ್ದು ಅವನು ಸುವಾರ್ತೆ ಸಾರುವದಕ್ಕಾಗಿ ಏನೇನು ಮಾಡಿದನೋ ಅದರಿಂದಾಗಿ ಕ್ರೈಸ್ತನ ಪ್ರಾರಂಭದ ವಿಶ್ವಾಸಿಗಳಿಗೆ ಅವನು ಕೊಟ್ಟ ಹಿಂಸೆ ಅಷ್ಟಿಷ್ಟಲ್ಲ. ಸಭೆಯನ್ನು ನಾಶ ಮಾಡಬೇಕೆಂಬ ಛಲ ಅವನಲ್ಲಿತ್ತು. ಅದಕ್ಕಾಗಿ ಅಧಿಕಾರಿಗಳ ಬಲವು ಅವನಿಗೆ ದೊರೆತಿತ್ತು. ಹೀಗಿದ್ದರೂ ದೇವರು ಅವನನ್ನು ದಮಸ್ಕದ ದಾರಿಯಲ್ಲಿ ಕರೆದಾಗ ಅವನು ಬಹಳ ಪ್ರಾಮಾಣಿಕನಾಗಿ ದೇವರ ಕರೆ ಸ್ವೀಕರಿಸಿ ಒಬ್ಬ ಶ್ರೇಷ್ಠ ಅಪೊಸ್ತಲನಾದ. " ಕ್ರಿಸ್ತನ ಸಭೆಗೆ ಅತಿ ಕ್ರೂರ ಹಾಗೂ ತೀವ್ರ ಹಿಂಸೆ ಕೊಟ್ಟವರೊಳಗೊಬ್ಬನಾದ ಇವನು ಸುವಾರ್ತೆ ಸಾರುವವನೂ, ಅದರ ಪರವಾಗಿ ನಿಂತು ಅದನ್ನು ರಕ್ಷಿಸುವವನು ಆದನು." ಎಲೆನ್ ಜಿ. ವೈಟ್, *ಸ್ಕೆಚ್ಸ್ ಫ್ರಮ್ ದಿ ಲೈಫ್ ಆಫ್ ಪಾಲ್, ಪು.9.*

ಪೌಲನು ಪೂರ್ವ ಜೀವನದ ಹಿಂಸಾಕ್ರಿಯೆಗಳು, ಆತನಿಗೆ ಯಾವಾಗಲೂ ತಾನೊಬ್ಬ ಅನರ್ಹ ವ್ಯಕ್ತಿಯೆಂದು ಸದಾ ಕಾಡಿಸಿದರೂ, ದೇವರಿಗೆ ಅಗಾಧ ಕೃತಜ್ಞನಾಗಿ ತಾನು ಪಡೆದ ದೇವರ ಕೃಪೆ ವ್ಯರ್ಥವಾಗಿಲ್ಲವೆಂದು ಹೇಳಬಹುದು. ಪೌಲನ ಪರಿವರ್ತನೆಯೊಂದಿಗೆ ಕ್ರೈಸ್ತತ್ವ ನಿರಂತರಕ್ಕೂ ಬದಲಾಗಿದೆ.

**ಭಾನುವಾರ** **ಜುಲೈ–29**

### ಸಭೆಯ ಹಿಂಸೆ.

ಪೌಲನು ಗ್ರೀಕರ ಸಂಪ್ರದಾಯದ ಯೆಹೂದ್ಯನು. ಆತನ ಜನ್ಮ ಸ್ಥಳ ತಾರ್ಸ, ಅದು ಕಿಲಕ್ಯದ ರಾಜಧಾನಿ (*ಅ.ಕೃ.21:39*). ಗ್ರೀಕರ ಸ್ಥಿರವಾದ ಅಭಿಪ್ರಾಯಕ್ಕೆ ಬಗ್ಗದೇ ಯರೂಸಲೇಮಿಗೆ ಬಂದು, ಅಂದು ಫರಿಸಾಯೇಪಂಗಡದ ಖಾಸಗುರು ಗಮಲಿಯೇಲನ ಕೆಳಗೆ ಶಿಕ್ಷಿತನಾದನು.(*ಅ.ಕೃ 22:3*). ಒಬ್ಬ ಫರಿಸಾಯನಾಗಿ ಪೌಲನು ಕಟುವಾದಿ ಮತ್ತು ಉಗ್ರಸಂಪ್ರದಾಯಸ್ಥನು. (*ಗಲಾ.1:14*). ಆತನು ಹೀಗಿದ್ದುದರಿಂದಲೇ ಸ್ತೆಫನನ ಸಾವಿಗೆ ಮೂಲ ಕಾರಣನೂ ಮತ್ತು ನಂತರ ನಡೆದ ಹಿಂಸೆಗೆ ಪ್ರಮುಖನಾದನು.

**ಅ.ಕೃ.2:9–11 ಓದಿರಿ: ಸಭೆಗೆ ವಿರುದ್ಧವಾಗಿ ಮಾಡಿದ ಕಾರ್ಯಗಳನ್ನು ಪೌಲನು ಹೇಗೆ ವಿವರಿಸಿದ್ದಾನೆ?**

---

---

---

ಒಂದು ಕಡೆ ಪೌಲನು ಸುವಾರ್ತೆ ಯೆಹೂದ್ಯರಿಗೆ ವಿಘ್ನವಾಗಿದೆ ಎಂದು ಹೇಳುತ್ತಾನೆ.(*1 ಕೊರಿ.1:23*) ಯೆಹೂದ್ಯರ ಸಂಪ್ರದಾಯಿಕ ನಿರೀಕ್ಷೆ ಯೇಸು ಒಬ್ಬ ರಾಜ ವಿಮೋಚಕನಾಗಿ ಬರುತ್ತಾನೆ ಎಂಬುದನ್ನು ಯೇಸು ಈಡೇರಿಸಲಿಲ್ಲ. ಶಿಲುಬೆ ಕಂಬದ ಮೇಲೆ ಸಾಯುವವನು ದೇವರ ಮೆಸ್ಸಿಯನೂ. ಎಂದು ಅವರು ಹೇಗೋ ಸ್ವೀಕರಿಸುವಂತಿರಲಿಲ್ಲ. ಏಕೆಂದರೆ ಹಾಗೆ ಕಂಬದ ಮೇಲೆ ಸಾಯುವವರು ಶಾಪಗ್ರಸ್ತರು ಎಂದು ಧರ್ಮಶಾಸ್ತ್ರದಲ್ಲಿ ಬರೆದಿದೆ.(*ಧರ್ಮೋ.21:23*). ಆದುದರಿಂದ ಯರಹೂದ್ಯರಿಗೆ ಕೃಜೆಯೇ ಒಂದು ವಿಕರಾಳ ವಿಪರ್ಯಾಸವಾಗಿತ್ತು. ಇದು ಸಭೆ ಯೇಸುವಿನ ಬಗ್ಗೆ ಹೇಳಿಕೊಳ್ಳುವದು ಸುಳ್ಳೆಂಬುದಕ್ಕೆ ಸ್ಪಷ್ಟ ಸಾಕ್ಷಿ ಕೂಡ.

ಅ.ಕೃ.9:1,2 ತಾರ್ಸದ ಸೌಲನು ಸಭೆಗೆ ವಿರುದ್ದವಾದ ಕಾರ್ಯದಲ್ಲಿರುವುದನ್ನು ಚಿತ್ರಿಸಿದೆ ದಮಸ್ಕಾವು ಯ–ೆರೂಸಲೇಮಿನಿಂದ ಉತ್ತರಕ್ಕೆ 135 ಮೈಲು ದೂರದ ಪ್ರಾಮುಖ್ಯ ಪಟ್ಟಣವಾಗಿತ್ತು ಮತ್ತು ಅದರಲ್ಲಿ ಹೆಚ್ಚು ಸಂಖೆಯ ಯಹೂದ್ಯರಿದ್ದರು. ಯರೂಸೇಲೇಮಿನ ಹೊರಗಿರುವ ಯೆಹೂದ್ಯರು ವ್ಯವಸ್ಥಿತರಾಗಿದ್ದು ಸ್ಥಳೀಯ ಸಭಾಮಂದಿರಗಳಲ್ಲಿ ಸೇರುತ್ತ ಯರೂಸಲೇಮಿನಲ್ಲಿ ಪ್ರಧಾನ ಕೇಂದ್ರ ಸನ್ಹೆಡ್ರಿನ್‌ನನೊಂದಿಗೆ ಸಂಪರ್ಕ ಇಟ್ಟುಕೊಂಡಿದ್ದರು. ಪ್ರದಾನ ಕಛೇರಿಯಿಂದ ಧಾರ್ಮಿಕ ಅಥವಾ ಇನ್ನಿತರ ಸಂದೇಶಗಳ ನಿರ್ವಹಣೆ ಸಂಪರ್ಕ ನೇಮಿಸಲ್ಪಟ್ಟ *'ಶಾಲೈ'* ಎಂಬಾತನ ಮೂಲಕವೇ ನಡೆಯುತ್ತಿತ್ತು.

ಮಹಾಯಾಜಕ, ಸನ್ಹೆಡ್ರಿನ್ ಅದ್ಯಕ್ಷರನ್ನು ಪೌಲನು ದಮಸ್ಕದ ಸಭಾಮಂದಿರಗಳಿಗೆ ಓಲೆಗಳನ್ನು ಬರೆದು ಕೊಡಿರಿ ಎಂದು ಕೇಳಿದಾಗ ಅವನು *'ಶಾಲೈ"* ಆದನು, ಆ ಮೂಲಕ ಯೇಸುವಿನ ಯಾವುದೇ ಹಿಂಬಾಲಕರನ್ನು ಬಂದಿಸಿ ಯರೂಸಲೇಮಿಗೆ ತರುವ ಅಧಿಕಾರ ಅವನಿಗೆ ಕೊಡಲ್ಪಟ್ಟಿತು (*ಅ.ಕೃ.26:12ರೊಂದಿಗೆ ಹೋಲಿಸಿರಿ*) ಗ್ರೀಕ್ ಭಾಷೆಯಲ್ಲಿ *'ಶಾಲೈ"* ಅನ್ನುವದಕ್ಕೆ *ಅಪೊಸ್ಟಲಾಸ್* ಅನ್ನುತ್ತಾರೆ, ಈ ಮೂಲದಿಂದಲೇ *'ಅಪೊಸ್ತಲ'* ಎಂಬ ಪದ ಬಂದಿದೆ. ಹೀಗೆ ಪೌಲನು ಯೇಸುವಿನ ಅಪೊಸ್ತಲನಾಗುವ ಪೂರ್ವದಲ್ಲೇ ಸನ್ಹೆಡ್ರಿನ್.

**ಈ ಹಿಂದೆ ನೀವು ಯಾವುದಾದರು ವಿಷಯದ ಪರವಾಗಿಯೇ(ವಿರುದ್ದವಾಗಿಯೇ) ಹುರುಪಿನಿಂದ ಕಾರ್ಯನಿರತರಾಗಿ ನಂತರ ಮನಸು ಬದಲಾಯಿಸಿದ್ದೀರಾ? ನೀವು ಅನುಭವದಿಂದ ಯಾವ ಪಾಠಗಳನ್ನು ಕಲಿತಿರಬಹುದು?**

ಸೋಮವಾರ ಜುಲೈ–30

## ದಮಸ್ಕದ ಮಾರ್ಗದಲ್ಲಿ

**ಅ.ಕೃ.9:3–9 ಓದಿರಿ: ಪೌಲನು ದಮಸ್ಕಕ್ಕೆ ಸಮೀಪಿಸುತ್ತಿರುವಾಗ ಆದದ್ದೇನು? ಅ.ಕೃ.9:5 ಯೇಸು ಹೇಳಿದ ಮಾತಿನ ವಿಶೇಷತೆ ಏನು?** (*ಅ.ಕೃ.26:14 ನೋಡಿರಿ*)

---

---

---

ಪೌಲನು ಮತ್ತು ಸಹಚರರು ದಮಸ್ಕಕ್ಕೆ ಸಮೀಪಿಸುತ್ತಿರುವಾಗ, ಅನಿರೀಕ್ಷಿತವಾದದ್ದು ನಡೆಯಿತು. ಸುಮಾರು ಮಧ್ಯಾಹ್ನದ ಹೊತ್ತಿಗೆ ತೀಕ್ಷಣವಾದ ಪ್ರಕಾಶಮಾನ ಬೆಳಕು ಪರಲೋಕದಿಂದ ಅವರ ಮೇಲೆ ಮಿಂಚಿತು ಮತ್ತು ವಾಣಿಯ–ೊಂದು ಕೇಳಿಸಿತು. ಪ್ರವಾದನೆಯಲ್ಲಿ ಹೇಳಿದಂತೆ ಇದೊಂದು ದರ್ಶನವಾಗಿರಲಿಲ್ಲ ಬದಲಾಗಿ ದೇವರ ಲೀಲೆಯಾಗಿತ್ತು ಪೌಲನಿಗೆ ದೇವರ ದರ್ಶನವಾಗಿತ್ತು. ಆತನ ಸಹಚರರು ಬೆಳಕನ್ನು ಕಂಡರು; ಆದರೆ ಪೌಲನು ಮಾತ್ರ ಅರ್ಥ ಮಾಡಿಕೊಂಡನು. ಆ ಬೆಳಕು ಪುನುರುತ್ಥಾನವಾಗಿ ಎದ್ದ ಕ್ರಿಸ್ತನ ಮಹಿಮಾ ಪ್ರಕಾಶವಾಗಿತ್ತು, ಆ ಸಮಯದಲ್ಲಿ ಯೇಸು ವೈಯಕ್ತಿಕವಾಗಿ ಪೌಲನಿಗೆ ಕಾಣಿಸಿಕೊಂಡನು(*ಅ.ಕೃ.22:14*).

ಇನ್ನೊಂದು ಬರವಣಿಗೆಯಲ್ಲಿ ನಾನು ಕ್ರಿಸ್ತನನ್ನು ಕಂಡೆನು ಎಂದು ಪೌಲನು ಬರೆದಿದ್ದಾನೆ, ಇದು ಆತನ ಅಪೊಸ್ತಲತನಕ್ಕೆ ಕಾರಣವಾಗಿದೆ(*1 ಕೊರಿ.9:1,15:8*)

ಅದಾದನಂತರ ಕ್ರಿಸ್ತನೊಡನೆಯ ಆತನ ಸಂಭಾಷಣೆ ಅ ಬೆಳಕಿಗಿಂತಲು ನಿರಂತರವಾಗಿ ಪ್ರಭಾವ ಬೀರಿತು. ಅಲ್ಲಿಯವರೆಗೆ ಪೌಲನು ನಜರೇತಿನ ಯೇಸುವಿನ ಹಿಂಬಾಲಕರನ್ನು ಹಿಂಸಿಸುವುದು ಯೆಹೂದ್ಯ ಮತವನ್ನು ಅದರ ಅಪಾಯಕಾರಿ ದ್ರೋಹಿ ವೈರಿಗಳಿಂದ ಶುದ್ದ ಮಾಡುತ್ತಿದೆ ಎಂಬುದನ್ನು ಖಚಿತಪಡಿಸಿಕೊಂಡಿದ್ದನು. ಆತನ ಆಶ್ಚರ್ಯಕ್ಕೆ, ಅವನು ಹೇಗೋ ಯೇಸು ಪುನರುತ್ಥಾನವಾಗಿ ಎದ್ದು ಜೀವಿಯಾಗಿದ್ದಾನೆ ಎಂಬುದನ್ನು ಖಚಿತಪಡಿಸಿಕೊಳ್ಳುವುದಷ್ಟೆ ಅಲ್ಲ ಆತನ ಹಿಂಬಾಲಕರಿಗೆ ಹಿಂಸೆ ಕೊಡುವುದರ ಮೂಲಕ ಯೇಸುವನ್ನೇ ಹಿಂಸಿಸುತ್ತಿದ್ದೇನೆ ಎಂದುಕೊಂಡನು.

ಸೌಲನಿಗೆ ಯೇಸು ಮಾತನಾಡುವಾಗ ಗ್ರೀಕ್ ಮೂಲದ, ಪೌಲನಿಗೆ ಪರಿಚಯವಿರುವ ಒಂದು ಜ್ಞಾನೋಕ್ತಿಯನ್ನು ಉಪಯೋಗಿಸಿದನು: "ಮುಳ್ಳುಗೋಲನ್ನು ಒದೆಯುವುದು ನಿನಗೆ ಕಷ್ಟ"(*ಅ.ಕೃ.26:14*). ಅದರ ಅರ್ಥ, ನೊಗ ಹೊತ್ತ ಎತ್ತು ಮಾರ್ಗ ತೋರಿಸಲು ಇರುವ ಚೂಪಾದ ಕೋಲಿಗೆಯಾದರೆ, ತಾನೇ ಹೆಬ್ಬಾನಿಗಾಯ ಮಾಡಿಕೊಳ್ಳುತ್ತದೆ. ಈ ಹೇಳಿಕೆ ಪೌಲನ ಮನಸ್ಸಿನಲ್ಲಾಗುವ ತುಮುಲವನ್ನು ಸೂಚಿಸುತ್ತದೆ-ಸತ್ಯವೇದವು ಇದನ್ನು ಪವಿತ್ರಾತ್ಮನ ಕಾರ್ಯವೆಂದು ಹೇಳುತ್ತದೆ (*ಯೋಹಾನ 16:8-11*). ಇದು ಸ್ತೆಫನನಿಗೆ ಆದುದ್ದನ್ನು ನಮ್ಮ ಗಮನಕ್ಕೆ ತರುತ್ತದೆ. "ಪೌಲನು ಸ್ತೆಫನ್ನನ ವಿಚಾರಣೆ ಮತ್ತು ಶಿಕ್ಷೆಯ ನಿರ್ಧಾರದಲ್ಲಿ ಪ್ರಧಾನ ಪಾತ್ರ ವಹಿಸಿದ್ದನು. ಅಶುದ್ಧಾತ್ಮನೊಡನೆ ದೇವರಾತ್ಮನು ಇದ್ದದ್ದನ್ನು ಕಂಡ. ಪೌಲನು ತಾನು ಕ್ರಿಸ್ತನ ಹಿಂಬಾಲಕರಿಗೆ ಕೊಡುವ ಹಿಂಸೆ ನೀತಿ ಕಾರ್ಯವೇ ಎಂದು ಶಂಕಿಸವಂತಾಯಿತು. ಆತನ ಮನಸ್ಸಿನಲ್ಲಿ ಗೊಂದಲವಾಯಿತು. ಪರಿಹಾರಕ್ಕಾಗಿ ಯಾರ ತಿಳಿವಳಿಕೆಯಲ್ಲಿ ಅವನಿಗೆ ಸಂಪೂರ್ಣ ಭರವಸೆ ಇತ್ತೋ ಅವರ ಮೊರೆಹೊಕ್ಕನು. ಯಾಜಕರ ಮತ್ತು ಅಧಿಕಾರಿಗಳವಾದ ಕೊನೆಗೂ ಅವನನ್ನು ಸ್ತೇಫನ್ ಒಬ್ಬ ದೇವದ್ರೋಹಿ ಎಂದು ಖಾತ್ರಿ ಮಾಡಿತು, ಅಲ್ಲದೆ ಯಾರ ಬಗ್ಗೆ ಹುತಾತ್ಮನಾದ ಶಿಷ್ಯನು ಬೋದನೆ ಮಾಡಿದ್ದನೋ, ಆ ಕ್ರಿಸ್ತನು ಒಬ್ಬ ಮೋಸಗಾರ, ಮತ್ತು ಪವಿತ್ರ ಕಛೇರಿಯ ಸೇವಕರು ಮಾಡುವುದು ಸರಿಯೋ-"- ಎಲೆನ್.ಜಿ.ವೈಟ್, *ದಿ ಆಕ್ಟ್ಸ್ ಆಫ ದಿ ಅಪೊಸ್ಟಲ್ಸ್, ಪುಟ 112,113.*

**ಮನಸ್ಸಾಕ್ಷಿಗೆ ಓಗೊಡುವುದು ಬುದ್ಧಿವಂತಿಕೆ ಯಾಕೆ?**

ಮಂಗಳವಾರ

ಜುಲೈ-31

## ಅನನೀಯನ ಭೇಟಿ.

ಸೌಲನು ಯೇಸುವಿನೊಡನೆ ಮಾತನಾಡುತ್ತಿರುವನು ಎಂದು ಖಚಿತವಾದಾಗ, ಅವನೊಂದು ಪ್ರಶ್ನೆ ಕೇಳಿದನು, ಯ-ೕಸು ಆ ಪ್ರಶ್ನೆಯಿಂದ ತನಗೆ ಸಿಗುವ ಅವಕಾಶಕ್ಕಾಗಿಯೇ ಕಾಯ್ದಿದ್ದನು: "ಕರ್ತನೇ ನಾನೇನು ಮಾಡಬೇಕು?" (*ಅ.ಕೃ.22:10*). ಈ ಪ್ರಶ್ನೆ ಅಲ್ಲಿಯವರೆಗೆ ನಡೆದ ಎಲ್ಲಾ ಘಟನೆಗಳು ಅವನಲ್ಲಿ ದೀನತೆ ಮೂಡಿಸಿರುವುದನ್ನು ವ್ಯಕ್ತಮಾಡುತ್ತವೆ, ಇದಕ್ಕಿಂತಲೂ ಪ್ರಾಮುಖ್ಯ, ಅಲ್ಲಿಂದ ಮುಂದೆ ಯಾವ ಷರತ್ತಿಲ್ಲದೆ. ಆತನ ಬದುಕನ್ನು ನಿರ್ದೇಶಿಸಲು ದೇವರಿಗೆ ಒಂದು ಅವಕಾಶವನ್ನು ಸ್ವಇಚ್ಚೆಯಿಂದ ಕೊಟ್ಟಂತಾಯಿತು. ದಮಸ್ಕಕ್ಕೆ ಒಯ್ಯಲ್ಪಟ್ಟು, ಮುಂದಿನ ಸೂಚನೆಗಳಿಗಾಗಿ ಸೌಲನು ಅಲ್ಲಿ ಕಾಯಬೇಕಾಯಿತು.

ಅ.ಕೃ. 9:10-19ರಲ್ಲಿ ತಾರ್ಸದ ಪೌಲನು ಅಪೊಸ್ತಲ ಪೌಲನನ್ನಾಗಿ ಮಾಡಲು ದೇವರು ಹೇಗೆ ಕಾರ್ಯಕೈಗೊಂಡನೆಂದು ಸತ್ಯವೇದವು ತಿಳಿಸುತ್ತದೆ. ದರ್ಶನದಲ್ಲಿ ಯೇಸು ಅನನೀಯನಿಗೆ ಕಾಣಿಸಿಕೊಂಡು ಸೌಲನಿಗೆ ದೃಷ್ಟಿ ಬರುವಹಾಗೆ ಅವನು ಹೋಗಿ ಸೌಲನ ಮೇಲೆ ಕೈ ಇಡಬೇಕೆಂದು ತಿಳಿಸಿದನು. ಈಗಾಗಲೇ ಸೌಲನು ಮಾಡಿದ ದುಷ್ಟಕಾರ್ಯಗಳು ಅನೇಕ ಶಿಷ್ಯರು ಬಾಧೆಯನ್ನನುಭವಿಸುವಂತೆ ಮಾಡಿದ್ದವು ಅಲ್ಲದೇ ಕೆಲವರನ್ನು ಹುತಾತ್ಮರನ್ನಾಗಿ ಮಾಡಿದ್ದವು, ಇದು ಅನನೀಯನಿಗೆ ತಿಳಿದಿತ್ತು. ಸೌಲನು ಯಾವ ಕಾರಣದಿಂದ ದಮಸ್ಕಕ್ಕೆ ಬಂದಿದ್ದನೆಂದು ಅನನೀಯನು ತಿಳಿದಿದ್ದನು. ಆದ್ದರಿಂದ ತಾನು ಸೌಲನ ಕೈಯಲ್ಲಿ ಸಿಕ್ಕಿ ಮೊದಲ ಬಲಿಯಾಗಬಾರದೆಂದು ಅವನಿಗನಿಸಿತು. ಆತನ ಈ ಭೀತಿಯನ್ನು ನಾವು ಅರ್ಥಮಾಡಿಕೊಳ್ಳಬಹುದು.

ಆದರೂ, ಅನನೀಯನಿಗೆ ಇನ್ನು ತಿಳಿಯದ ವಿಷಯ, ಸೌಲನು ಇಷ್ಟರಲ್ಲಿ ಯೇಸುವನ್ನು ವೈಯಕ್ತಿಕವಾಗಿ ನೋಡಿದ್ದು, ಅದು ಆತನ ಬದುಕನ್ನು ಬದಲಾಯಿಸಿದ್ದು. ಅನನೀಯನಿಗೆ ಇನ್ನೂ ತಿಳಿಯದ ವಿಷಯವೇನೆಂದರೆ, ಸೌಲನು ಸನ್ಹೆದ್ರಿನ್ ಅಪೊಸ್ತಲನಾಗಿರದೇ ಕ್ರಿಸ್ತನಿಂದ ಸುವಾರ್ತೆಯನ್ನು ಯಹೂದ್ಯರಿಗೂ ಅನ್ಯರಿಗೂ ಸಾರುವ ಅಪೊಸ್ತಲನಾಗಿ ಮಾಡಲ್ಪಟ್ಟನು, ಇದು ಅನನೀಯನಿಗಾದ ವಿಸ್ಮಯ.

**ಗಲಾತ್ಯದವರಿಗೆ 1:1,11,12 ಓದಿರಿ: ಪೌಲನು ತನ್ನ ಅಪೊಸ್ತಲತನದ ಬಗ್ಗೆ ಹೇಳಿಕೊಳ್ಳುವದೇನು?**

ಗಲಾತ್ಯದಲ್ಲಿ ಪೌಲನು ತಿಳಿಸಿದ್ದು, ಆತನಿಗೆ ದೊರೆತ ಸಂದೇಶ ಮತ್ತು ಅಪೊಸ್ತಲತನ ಕ್ರಿಸ್ತನಿಂದಲೇ ವಿನಃ ಯಾವ ಮಾನವ ಮೂಲದಿಂದಲ್ಲ. ಆತನ ಕರೆಯುವಿಕೆಯಲ್ಲಿ ಅನನೀಯನ ಪಾತ್ರದ ಬಗ್ಗೆ ಇಲ್ಲಿ ಯಾವ ವಿವಾದವಿಲ್ಲ. ಅವನನ್ನು ಭೇಟಿಯಾದಾಗ ಅನನೀಯನು ಸೌಲನಿಗೆ ದೇವರು ದಮಸ್ಕದ ಮಾರ್ಗದಲ್ಲಿ ಕೊಟ್ಟ ಸೇವೆ ಆದೇಶ ಕುರಿತು ಖಚಿತ ಪಡಿಸಿದನು.

ಸೌಲನ ಬದುಕಿನಲ್ಲಿ ಬದಲಾವಣೆ ಎಷ್ಟು ಅದ್ಭುತಕರವಾಗಿತ್ತೆಂದರೆ, ಯಾವ ಮಾನವನಿಂದಲೂ ಅದು ಸಾಧ್ಯವಿರಲಿಲ್ಲ. ಅದೊಂದು ದೈವಿಕ ಕಾರ್ಯವೇ, ಯೇಸುವಿನ ಕಠೋರ ವಿರೋಧಿ ಕ್ಷಣದಲ್ಲಿಯೇ ಮಾರ್ಪಟ್ಟು, ಯೇಸು ತನ್ನ ವಿಮೋಚಕನೂ, ಪ್ರಭುವೂ ಎಂದು ಅಂಗೀಕರಿಸುವುದು, ಎಲ್ಲವನ್ನೂ ತ್ಯಜಿಸುವುದು – ಸ್ವತಃ, ತನಗಿದ್ದ ಹೆಸರು, ತನ್ನ ವೃತ್ತಿ ಹಿಂದೆ ಬಿಟ್ಟು, ಯೇಸುವಿನ ಆದ್ಯ, ಫಲಭರಿತ ಅಪೊಸ್ತಲನಾದನು.

**ದೇವರ ಅದ್ಭುತಕರ ಕೃಪೆ ಯಾವಾವ ರೀತಿಯಲ್ಲಿ ಕೆಲಸ ಮಾಡುತ್ತದೆ ಎಂಬುದನ್ನು ಸೌಲನ ಪರಿವರ್ತನೆಯು ಹೇಗೆ ತೋರಿಸಿಕೊಡುತ್ತದೆ? ನಿಮ್ಮ ಬದುಕಿನಲ್ಲಿ ಅವರು ದೇವರ ಸತ್ಯ ಸ್ವೀಕರಿಸಲಾರರು ಎಂದು ನೀವು ಶಂಕಿಸುವವ ವ್ಯಕ್ತಿಗಳ ಬಗ್ಗೆ ಈ ಕಥೆಯಿಂದ ನೀವೇನು ಕಲಿಯುವಿರಿ?**

**ಬುಧವಾರ** ಆಗಸ್ಟ್–1

## ಪೌಲನ ಸೇವೆಯ ಪ್ರಾರಂಭ

ಅ.ಕೃ.9:19–25 ನಮಗೆ ತಿಳಿಸುವದೇನೆಂದರೆ ಪೌಲನು ತನ್ನ ಪರಿವರ್ತನೆಯನಂತರ ದಮಸ್ಕದಲ್ಲಿಯೇ ಕೆಲ ಕಾಲ ಉಳಿದು ಆನಂತರ ಯೆರೂಸಲೇಮಿಗೆ ಹಿಂದಿರುಗಿದನು ಎಂದು(ಅ.ಕೃ.9:26). ಆದರೆ ಗಲಾತ್ಯದವರಿಗೆ 1:17ರಲ್ಲಿ ಪೌಲನು ಇನ್ನೂ ತಿಳಿಸುವುದು, ಯೆರೂಸಲೇಮಿಗೆ ಆತನು ತೆರಳುವ ಪೂರ್ವದಲ್ಲಿ ಅರಬಸ್ಥನಾಗಿ ಹೋಗಿ ಏಕಾಂತವಾಗಿ ಕೆಲ ಸಮಯ ಕಳೆದನು. "ಮರುಭೂಮಿಯ ಏಕಾಂತದಲ್ಲಿ ಪೌಲನಿಗೆ ಧ್ಯಾನ ಮಾಡಲು, ಅಭ್ಯಾಸ ಮಾಡಲು ಸಾಕಷ್ಟು ಸಮಯ ದೊರೆಯಿತು". ಎಲೆನ್.ಜಿ.ವೈಟ್, *ದಿ ಆಕ್ಟ್ಸ್ ಆಫ್ ದಿ ಅಪೊಸ್ಟಲ್ಸ್ ಪು.125.*

**ಅ.ಕೃ. 9:20–25 ಓದಿರಿ: ದಮಸ್ಕದಲ್ಲಿಯ ಪೌಲನ ಸೇವೆಯನ್ನು ಲೂಕನು ಹೇಗೆ ವಿವರಿಸುತ್ತಾನೆ? ಅದು ಎಷ್ಟು ಸುಗಮವಾಗಿ ಸಾಗಿತು?**

ಯೆರೂಸಲೇಮನ್ನು ಬಿಡುವಾಗ ಪೌಲನ ಪ್ರಥಮ ಗುರಿ, ದಮಸ್ಕದ ಸಭಾಮಂದಿರಗಳಲ್ಲಿ ಆಶ್ರಯ ಪಡೆದ ಯೆಹೂದ್ಯ ವಿಶ್ವಾಸಿಗಳು(*ಅ.ಕೃ.9:2*). ಈಗ ಅರಬಸ್ಥಾನದಿಂದ ಹಿಂದಿರುಗಿ ಸಭಾಮಂದಿರಕ್ಕೆ ಬಂದನು, ಅಲ್ಲಿಯ ವಿಶ್ವಾಸಿಗಳನ್ನು ಬಂಧಿಸಲು ಬರಲಿಲ್ಲ ಬದಲಾಗಿ ಅವರ ಸಂಖ್ಯೆ ಹೆಚ್ಚಿಸಲು; ಯೇಸು ವಂಚಕನೆಂದು ಹೇಳಲು ಅಲ್ಲ, ಅವನು ಇಸ್ರಾಯೇಲರ ಮೆಸ್ಸೀಯನೆಂದು ಸಾರಲು. ಇಲ್ಲಿಯವರೆಗೆ ಅವನೊಬ್ಬ ಕ್ರೈಸ್ತರ ಹಿಂಸಕನೆಂದುಗೊತ್ತಿದ್ದವರ ಮನಸ್ಸಿನಲ್ಲಿ ಏನಾಗಿರಬಹುದು, ಅವನು ಯೇಸುವಿನ ಸಾಕ್ಷಿ ಕೊಡುವುದನ್ನು ನೋಡಿ? ಅದನ್ನು ನೋಡಿ ಅವರು ಆಶ್ಚರಪಡಬಹುದೇ ಹೊರತು ಬೇರೇನೂ ಮಾಡಲು ಸಾಧ್ಯ? (ಮುಂದೆ ಇವನು ಎಂಥ ಪ್ರಭಾವಿತನಾಗುವನೆಂದು ಅವರು ಊಹಿಸಿರಲಿಲ್ಲ)

ಪೌಲನನ್ನು ಎದುರಿಸಲಾರದೆ, ಆತನ ವಿರೋಧಿಗಳು ಆತನ ಜೀವ ತೆಗೆಯಲು ಪ್ರಯತ್ನಿಸಿದರು. ಪೌಲನ ಕಥೆಯ ವರದಿ (*2 ಕೊರಿಂಥ 11:32,33*) ನಮಗೆ ತಿಳಿಸುತ್ತದೆ, ಆತನ ವಿರೋಧಿಗಳು ಅವನನ್ನು ತ್ಯಜಿಸಿ ತಮ್ಮ ಗುರಿಸಾಧಿಸಲು ಅವನನ್ನು ಸ್ಥಳಿಯ ಅಧಿಕಾರಿಗಳಿಗೆ ಒಪ್ಪಿಸಿ ಬಿಟ್ಟರು. ಹೇಗೋ ವಿಶ್ವಾಸಿಗಳ ಸಹಾಯದಿಂದ, ಪೌಲನು ಕೋಟೆಯ ಗೋಡೆಯ ಮೇಲಿನ ಮನೆಯ ಕಿಟಕಿಯಿಂದ ಬುಟ್ಟಿಯಲ್ಲಿ ಇಳಿಸಲ್ಪಟ್ಟವನಾಗಿ ತಪ್ಪಿಸಿಕೊಂಡನು.

ಪೌಲನಿಗೆ ಪ್ರಾರಂಭದಿಂದಲೇ ತನಗೆ ಸವಾಲುಗಳಿವೆ ಎಂಬುದು ತಿಳಿದಿತ್ತು (*ಅ.ಕೃ.9:16*) ವಿರೋಧತೆ, ಹಿಂಸೆ, ನೋವು–ಬಾಧೆ, ಸಮಾಜದ ಎಲ್ಲ ಕಡೆಗಳಿಂದಲೂ ಯಾವಾಗಲೂ ಸೇವೆಗೆ ಎದುರಾಗುತ್ತವೆ ಎಂಬುದನ್ನು ಅರಿತು, ಅವುಗಳನ್ನು ಅನುಭವಿಸಿದನು ಆದರೆ ಇದಾವದು ಆತನ ವಿಶ್ವಾಸಕ್ಕಾಗಲೀ, ಕಾರ್ಯ ನಿಷ್ಠೆಗಾಗಲೀ ದಕ್ಕೆ ತರಲಿಲ್ಲ. ತನ್ನ ಈ ನೂತನ ಬದುಕಿನುದ್ದಕ್ಕೂ ಹಿಂಸೆ ತಾಳಿಕೊಂಡೇ ಮುಂದೆ ಸಾಗಿದನು (*2 ಕೊರಿ. 4:8,9*).

**ಪೌಲನು ಎಷ್ಟೋ ವಿರೋಧತೆ ಮತ್ತು ಕಷ್ಟ ಎದುರಿಸಿದರೂ ತನ್ನ ಹೊರಾಟ ಬಿಟ್ಟುಕೊಡಲಿಲ್ಲ. ಹೇಗೆ ನಾವು ಕೂಡ ವಿಶ್ವಾಸಕ್ಕೆ ಸವಾಲು ಬಂದಾಗ ಹೇಗೆ ಸ್ಥಿರವಾಗಿರಬಹುದು? ವಿರೋಧತೆ ಮತ್ತು ನಿರುತ್ಸಾಹಗಳನ್ನು ಕೂಡ ವಿಶ್ವಾಸಕ್ಕೆ ಸವಾಲು ಬಂದಾಗ ಹೇಗೆ ಗೆಲ್ಲುವಿರಿ?**

**ಗುರುವಾರ** ಆಗಸ್ಟ್ – 2

## ಯೆರೂಸಲೇಮಿಗೆ ಹಿಂದಿರುಗುವುದು

ಪೌಲನು ಹಿಂಸೆ ಪಡಿಸುವವನಾಗಿ ದಮಸ್ಕಕ್ಕೆ ಹೋದವನು, ಅಲ್ಲಿಂದ ತಪ್ಪಿಸಿಕೊಂಡನಂತರ ಮೊದಲ ಸಲ ಯ–ೆರೂಸಲೇಮಿಗೆ ಆಗಮಿಸಿದನು. ಆತನು ಪರಿವರ್ತನೆಯಾಗಿ ಮೂರು ವರ್ಷಗಳ ನಂತರ ಇದಾಯಿತು(*ಗಲಾ.1:18*). ಇದು ಅವನಿಗೆ ಸುಲಭವಾಗಿರಲಿಲ್ಲ, ಯಾಕೆಂದರೆ ಅವನಿಗೆ, ತೊಂದರೆಗಳು ಸಭೆಯ ಒಳಗಿನಿಂದ ಮತ್ತು ಹೊರಗಿನಿಂದಲು ಎದುರಾಗಿದ್ದವು.

**ಅ.ಕೃ.9:26–30 ಓದಿರಿ. ಪೌಲನು ಯೆರೂಸಲೇಮಿಗೆ ಹಿಂದಿರುಗುದಾಗ ಅವನಿಗಾದದ್ದು ಏನು?**

______________________________

______________________________

______________________________

ಯೆರೂಸಲೇಮಿನಲ್ಲಿ, ಪೌಲನು ಅಪೊಸ್ತಲರನ್ನು ಸೇರಿಕೊಳ್ಳಲು ಪ್ರಯತ್ನಿಸಿದನು. ಇಷ್ಟು ಹೊತ್ತಿಗೆ ಅವನು ಕ್ರೈಸ್ತನಾಗಿ ಮೂರು ವರ್ಷಗಳಾಗಿದ್ದರೂ, ಆತನ ಪರಿವರ್ತನೆ ಸುದ್ಧಿಯನ್ನು ಅಪೊಸ್ತಲರು ನಂಬುವುದು ಕಷ್ಟವೇ ಆಗಿತ್ತು, ಅನನೀಯನು ಶಂಕಿಸಿದ ಹಾಗೆ ಅವರಲ್ಲಿಯೂ ಅನುಮಾನಗಳು ಹುಟ್ಟಿದವು. ಇದೊಂದು ಒಳ ಸಂಚಿನ ತಂತ್ರವಿರಬಹುದು ಎಂದು ಅವರು ಭಯಪಟ್ಟರು. ಆದರೆ ಕುಪ್ರ ದ್ವೀಪದ ಬಾರ್ನಾಬವೆಂಬವನು(*ಅ.ಕೃ.4:36,37*) ಗ್ರೀಕ್ ಸಂಪ್ರದಾಯಸ್ಥನಾಗಿ, ಅಪೊಸ್ತಲರ ವಿರೋಧತೆಯ ಅಡ್ಡಗೋಡೆಯನ್ನ ಭೇದಿಸಿ ಪೌಲನನ್ನು ಅವರಿಗೆ ಪರಿಚಯಸಿದನು. ಒಂದು ಸಾರಿ, ಅವನ ಪರಿರ್ತನೆ ನಿಜವಾದದ್ದು ಎಂದು ಅರಿತಮೇಲೆ ಅವರೆಲ್ಲರೂ ವಿಸ್ಮಯಗೊಂಡರು.

ಪೌಲನು ಮೊದಲು ಕ್ರೈಸ್ತರನ್ನು ಕ್ರೂರವಾಗಿ ಹಿಂಸಿಸಿ, ಈಗ ಸುವಾರ್ತೆಯನ್ನು ಅಷ್ಟು ನಿಷ್ಠೆಯಿಂದ ಸಾರುತಿದ್ದರೂ ಜನರು ಆತನನ್ನು ಸಂಪೂರ್ಣವಾಗಿ ಅಂಗೀಕರಿಸಲಿಲ್ಲ. ಸ್ತೆಫನನ ವಿಷಯದಲ್ಲಿ ನಡೆದಂತೆ ಯೆಹೂದ್ಯ ವಿಶ್ವಾಸಿಗಳು ಅಪೊಸ್ತಲರ ಸಮೇತ, ಕ್ರೈಸ್ತ ವಿಶ್ವಾಸ ಸುರ್ವಾತಿಕವಾದದ್ದೆಂದು ಅರ್ಥಮಾಡಿಕೊಳ್ಳುವದರಲ್ಲಿ ನಿಧಾನಿಸಿದರು, ಈ ವಿಶ್ವಾಸ ಹಳೆ ಒಡಂಬಡಿಕೆಯ ವಿಧಿಗಳನ್ನು ಆಧರಿಸಿರಲಿಲ್ಲ, ಅದರಲ್ಲೂ ವಿಶೇಷವಾಗಿ ಯಜ್ಞಯಾಗದಿಗಳನ್ನು, ಇವು ಕ್ರಿಸ್ತನ ಶಿಲುಬೆಯ ಮರಣದಲ್ಲಿ ಅಂತ್ಯಗೊಂಡಿದ್ದವು. ಯೆಹೂದ್ಯ ಸಭೆಯಲ್ಲಿ ಪೌಲನು ಅತಿ ಸಮೀಪದ ನಿಕಟವರ್ತಿಗಳು ಗ್ರೀಕ್ ಸಂಪ್ರದಾಯಸ್ಥ ವಿಶ್ವಾಸಿಗಳೇ; ಬರ್ನಾಬ, ಫಿಲಿಪ್ ಏಳರಲ್ಲಿ ಒಬ್ಬ(*ಅ.ಕೃ.21:8*) ಮತ್ತು ಕುಪ್ರದೇಶದ ಮ್ನಾಸೋನನೆಂಬವನು (*ಅ.ಕೃ.21:16*). ಅದಾದ ಅನೇಕ ವರ್ಷಗಳನಂತರವೂ ಯೆರೂಸಲೇಮಿನ ಕೆಲವು ಮುಖಂಡರು ಪೌಲನು ಸ್ತೇಫನನರೀತಿಯಲ್ಲಿಯೇ, ಅದೇ ತತ್ವಗಳ ಆಧಾರದ ಮೇಲೆ ಬೋಧಿಸುತ್ತಾನೆ ಎಂದು ದೂರಿದರು(*ಅ.ಕೃ.21:21*)

ಪೌಲನು ಯೆರುಸಲೇಮಿನಲ್ಲಿದ್ದ ಹದಿನೈದು ದಿನ(ಗಲಾ.1:18), ಸುಮ್ಮನಿರದೆ, ಈ ಮೊದಲು ಯಾವ ವಿಶ್ವಾಸಿಗಳಲ್ಲದ ಯಹೂದ್ಯರನ್ನು ಸ್ತೆಫನನಿಗೆ ವಿರುದ್ಧವಾಗಿ ಪ್ರಚೋದಿಸಿದ್ದನೋ ಅವರ ಬಳಿಗೆ ಹೋಗಿ ಸುವಾರ್ತೆ ಸಾರಿದನು. ಅವರು ಸ್ತೆಫನನನ್ನು ಹೇಗೆ ವಿರೋಧಿಸಿದ್ದರೋ ಅದೇ ರೀತಿ ಪೌಲನನ್ನು ವಿರೋಧಿಸಿದರು, ಅಷ್ಟೇ ಅಲ್ಲ ಆತನಿಗೆ ಜೀವಬೆದರಿಕೆಯನ್ನು ಹಾಕಿದರು. ತನ್ನ ಒಳ್ಳೆಯದಕ್ಕಾಗಿ ಯೆರೂಸಲೇಮನ್ನು ಬಿಟ್ಟುಹೋಗಬೇಕೆಂದು ಯೇಸು ಪೌಲನಿಗೆ ದರ್ಶನದಲ್ಲಿ ತಿಳಿಸಿದರು(ಅ.ಕೃ.22:17–21). ಸಹೋದರರ ಸಹಾಯದಿಂದ, ಕೈಸರೈಯ ಹೋಗಿ ಅಲ್ಲಿಂದ ಕಲಿಕ್ಕೈದಲ್ಲಿರುವ ತಮ್ಮ ಊರಿಗೆ ಹೋದನು. ಮುಂದಿನ ಸೇವಾಪ್ರಯಾಣ ಕೈಗೊಳ್ಳುವವರಿಗೂ ಅನೇಕ ವರ್ಷ ಅಲ್ಲಿಯೇಉಳಿದನು.

**ಹೆಚ್ಚಿನ ಅಭಾಸಕ್ಕಾಗಿ:** "ಒಂದು ಯುದ್ಧದಲ್ಲಿ ಒಬ್ಬ ಸೈನ್ಯಾಧಿಪತಿ ಮಡಿದರೆ ಅದು ಆತನ ಸೈನ್ಯಕ್ಕೆ ನಷ್ಟವೇ, ಆ ಸಾವು ಅವರ ವೈರಿಗಳಿಗೇನೂ ಹೆಚ್ಚಿನ ಬಲ ಕೊಡಿಸುವದಿಲ್ಲ. ಆದರೆ ಒಬ್ಬ ಪ್ರಮುಖ ವ್ಯಕ್ತಿ ಹೋಗಿ ವೈರಿಗಳನ್ನೇನಾದರೂ ಸೇರಿಕೊಂಡರೆ, ಆತನ ಸೇವೆಯ ನಷ್ಟವಾಗುವದಲ್ಲದೆ ಯಾರನ್ನು ಅವನು ಹೋಗಿ ಸೇರಿಕೊಳ್ಳುವನೋ ಅವರಿಗೆ ನಿಶ್ಚಿತ ಲಾಭವಾಗುತ್ತದೆ. ತಾರ್ಸದ ಸೌಲನು ದಮಸ್ಕದ ಮಾರ್ಗದಲ್ಲಿರುವಾಗ ಸ್ವಾಮಿಯು ಅವನನ್ನು ಸುಲಭವಾಗಿ ಹೊಡೆದು ಕೊಲ್ಲಬಹುದಾಗಿತ್ತು, ಹಾಗಾಗಿದ್ದರೆ ಹಿಂಸೆ ಪಡಿಸುವವರ ಬಲ ಬಹಳ ಕಡಿಮೆಯಾಗಿರುತ್ತಿತ್ತು. ಆದರೆ ದೇವರು ತನ್ನ ನಡೆಸುವಿಕೆಯಲ್ಲಿ ಪೌಲನ ಜೀವ ಉಳಿಸುವದಲ್ಲದೇ ಆತನನ್ನು ಪರಿವರ್ತಿಸಿದನು, ಹೀಗೆ ಒಬ್ಬ ಖ್ಯಾತ ವ್ಯಕ್ತಿಯನ್ನು ವೈರಿಯ ಕಡೆಯಿಂದ ಕ್ರಿಸ್ತನ ಕಡೆಗೆ ವರ್ಗಾಯಿಸಿದನು. ಎಲೆನ್.ಜಿ.ವೈಟ್. *ದಿ ಆಕ್ಟ್ಸ್ ಆಫ ದಿ ಅಪೋಸ್ಟಲ್ಸ್ ಪು.124*

"ಕ್ರಿಸ್ತನು ತನ್ನ ಶಿಷ್ಯರಿಗೆ ಎಲ್ಲ ದೇಶಗಳಿಗೆ ಹೋಗಿ ಜನರಿಗೆ ಕಲಿಸಿರಿ ಎಂಬ ಆಜ್ಞೆ ಕೊಟ್ಟನು ಈ ಮೊದಲು ಅವರು ಯಹೂದ್ಯರಿಂದ ಹೊಂದಿದ ತಿಳುವಳಿಕೆಯಿಂದ ತಮ್ಮ ಗುರುವಿನಿಂದ ಬಂದ ಆದೇಶವನ್ನು ಅರ್ಥಮಾಡಿಕೊಳ್ಳುವದು ಕಷ್ಟವಾಯಿತು, ಆದ್ದರಿಂದ ಕಾರ್ಯಕೈಗೊಳ್ಳುವುದು ನಿಧಾನವಾಯ್ತು. ತಮ್ಮನ್ನೇ ತಾವು ಅಬ್ರಹಾಮನ ಮಕ್ಕಳೆಂದು ಕರೆದುಕೊಂಡರು, ದೈವಿಕ ವಾಗ್ದಾನಕ್ಕೆ ಬಾಧ್ಯಸ್ಥರೆಂದು ಪರಿಗಣಿಸಿಕೊಂಡರು. ಕ್ರಿಸ್ತನು ಆರೋಹಣನಾಗಿ ಹೋಗಿ ಕೆಲವು ವರ್ಷಗಳ ನಂತರವೇ ಆತನು ಹೇಳಿದ ವಾಕ್ಯವನ್ನು ಅವರು ಗ್ರಹಿಸಿ ಅನ್ಯರನ್ನು ಮತು ಯೆಹೂದ್ಯರನ್ನು ಪರಿವರ್ತಿಸಬೇಕು, ಎಂಬುವುಗಳನ್ನು ಅರ್ಥಮಾಡಿಕೊಳುವ ಸಾಮರ್ಥ್ಯ ಅವರಲ್ಲುಂಟಾಯಿತು"–ಎಲೆನ್.ಜಿ.ವೈಟ್. *ಸ್ಕೆಚ್ಚಸ್ ಫ್ರಮ್ ದಿ ಲೈಫ್ ಆಫ್ ಪಾಲ್, ಪು.38.*

**ಚರ್ಚೆಯ ಪ್ರಶ್ನೆಗಳು:**

1) ದಮಸ್ಕದ ಮಾರ್ಗದಲ್ಲಿ ಯೇಸು ಪೌಲನನ್ನು ಕೇಳಿದ ಪ್ರಶ್ನೆ "ಯಾಕೆ ನನ್ನನ್ನು ಹಿಂಸೆ ಪಡಿಸುತ್ತೀ? (ಅ.ಕೃ.9:4), ಇದನ್ನು ಹೆಚ್ಚಾಗಿ ದ್ಯಾನ ಮಾಡಿರಿ. ಪೌಲನಿಗೆ ಈ ಪ್ರಶ್ನೆ ಸೂಚಿಸಿದ್ದೇನೆಂದರೆ, ನಜರೇತಿನ ಯೇಸು ಸತ್ತವರೊಳಗಿಂದ ಪುನರುತ್ಥಾನವಾಗಿ ಎದ್ದಿದ್ದಾನೆ. ಅದಕಿಂತಲೂ ಹೆಚ್ಚಾಗಿ ಯೇಸುವಿನ ಮತ್ತು ಕ್ರೈಸ್ತನ ನಡುವಿನ ಅಧ್ಯಾತ್ಮಿಕ ಚಿಹ್ನೆಯನ್ನು ಸೂಚಿಸುತ್ತದೆ(ಮತಾ.25:34–35). ಇದರ ಎಚ್ಚರಿಕೆ ಸ್ಪಷ್ಟವಾಗಿದೆ: ಸಭೆಗೆ ಏನಾದರು ಕೇಡುಮಾಡಿದರೆ ಯೇಸುವಿಗೇನೇ ಕೇಡು ಮಾಡಿದ ಹಾಗೆ. ಇಂದಿನ ನಮ್ಮ ವ್ಯವಹಾರಿಕ ಬದುಕಿನಲ್ಲಿ ಇದು ಯಾವ ಅರ್ಥ ಕೊಡುತ್ತದೆ?

2) ಕ್ರಿಸ್ತನಿಗಾಗಿ ಸಾಕ್ಷಿಯಾಗಿರುವದು, ಕ್ರಿಸ್ತನಿಗಾಗಿ ಬಾಧೆಯನ್ನನುಭವಿಸುವದನ್ನೂ ಒಳಗೊಂಡಿದೆ. ಗ್ರೀಕ್ ಮೂಲ ಪದ"ಸಾಕ್ಷಿ" ಎಂಬುದು "ಹುತಾತ್ಮ" ಪದದೊಂದಿಗೆ ಉಪಯೋಗಿಸಲ್ಪಡುತ್ತಿದೆ, ಕ್ರಿಸ್ತನಿಗಾಗಿ ಬಾಧೆ ಅನುಭವಿಸುವದು ಎಂದರೆ ನಿಮಗೇನು ಅನಿಸುತ್ತದೆ?

3) ಒಂದು ಲಾಟೀನ ನಾಣ್ನುಡಿ ಇದೆ. ಕ್ರೆಡು ಉಟ್ ಇನ್ಟೆಲ್ಲಿಗಮ್, ಹಾಗೆಂದರೆ, "ನಾನು, ಅರ್ಥಗ್ರಹಿಕೆಗಾಗಿ ನಂಬುತ್ತೇನೆ. ಈ ಒಂದು ಕಲ್ಪನೆ ತಾರ್ಸಾದ ಪೌಲನಿಗೆ ಆದದ್ದನ್ನು ಅರ್ಥಮಾಡಿಕೊಳ್ಳಲು ಹೇಗೆ ಸಹಾಯ ಮಾಡುತ್ತದೆ? ಅದು, ಪೌಲನು ಪರಿವರ್ತನೆಗೊಳ್ಳುವ ಮೊದಲು, ಯೇಸುವಿನ ವಿಶ್ವಾಸಿಯಾಗುವ ಮೊದಲು, ಅವನಿಗೆ ಅರ್ಥವಾಗಲಿಲ್ಲ. ಆತನ ಅನುಭವದ ನಂತರವೇ ಅವನಿಗೆ ಅರ್ಥವಾಯಿತು, ನಮಗೆ ಸತ್ಯ ಸ್ಪಷ್ಟವಾಗಿ ತಿಳಿದಂತೆ ಇತರರಿಗೆ ತಿಳಿಯದಿದ್ದಾಗ ನಮಗೆ ಆಶಾಭಂಗವಾಗಬಹುದು, ಮೇಲಿನ ಘಟಣೆಯಿಂದ ನಾವು ಯವ ಪಾಠ ಕಲಿಯಬಹುದು?